**File No.DPAR/50/EGM/2019-DS-dparegovsec**
**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ವಿವಿಧ ವರ್ಗಗಳ ಮಾರಾಟಗಾರರ ನಮೂದಿತ ಪಟ್ಟಿಯ (Empanelment) ಕುರಿತು.

ಓದಲಾಗಿದೆ:

1. ದಿನಾಂಕ: 26/27.9.2018 ರ ಟೆಂಡರ ಪ್ರಕಟಣೆ ಸಂಖ್ಯೆ: ಸಿಆಸುಇ 105 ಇಆಇ 2018.
2. ದಿನಾಂಕ: 14.06.2019 ರಂದು ನಡೆದ ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಸಮಿತಿಯ ಉಪಸಮಿತಿಯ ನಡವಳಿ.
3. ದಿನಾಂಕ: 08.07.2019 ರಂದು ನಡೆದ ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಸಮಿತಿಯ ನಡವಳಿ.

ಪ್ರಸ್ತಾವನೆ:

1. ರಾಜ್ಯದಲ್ಲಿರುವ ವಿವಿಧ ಸರ್ಕಾರಿ ಕಛೇರಿಗಳಲ್ಲಿ ಗಣಕೀಕರಣಕ್ಕಾಗಿ ಅವಶ್ಯವಿರುವ ಗಣಕ ಯಂತ್ರಗಳು, ಪ್ರಿಂಟರುಗಳು, ಅವುಗಳ ಪೂರಕ ಸಾಧನಗಳು, ವಿವಿಧ ತಂತ್ರಾಂಶಗಳು, ತಂತ್ರಾಂಶ ಸಿದ್ದಪಡಿಸುವಿಕೆ, ನೆಟ್ ವರ್ಕಿಂಗ್, ಯು.ಪಿ.ಎಸ್, ತರಬೇತಿ, ವೆಬ್ ಡಿಸೈನಿಂಗ್, ಡೇಟಾ ಎಂಟ್ರಿ ಹಾಗೂ ವಾರ್ಷಿಕ ನಿರ್ವಹಣೆ ಮುಂತಾದ ಉಪಕರಣ/ಸಾಮಗ್ರಿ/ಸೇವೆಗಳನ್ನು ಪೂರೈಸುವುದಕ್ಕಾಗಿ ಸೂಕ್ತ ಸರಬರಾಜು ಸಂಸ್ಥೆಗಳನ್ನು ಸಂಕ್ಷಿಪ್ತಗೊಳಿಸಲು, ಅರ್ಹ ಸಂಸ್ಥೆಗಳಿಂದ ಅರ್ಜಿಗಳನ್ನು ಮೇಲೆ (1)ರಲ್ಲಿ ಓದಲಾದ ದಿನಾಂಕ 26/27.9.2018 ರ ಟೆಂಡರ ಪ್ರಕಟಣೆಯ ಮೂಲಕ ಕರೆಯಲಾಯಿತು.
2. ನಾನಾ ಸಂಸ್ಥೆಗಳು ಸಲ್ಲಿಸಿದ ಅರ್ಜಿಗಳನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಇ-ಆಡಳಿತ)ಯವರ ಅಧ್ಯಕ್ಷತೆಯಲ್ಲಿ ರಚಿತವಾಗಿರುವ **ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಸಮಿತಿಯ ಉಪ ಸಮಿತಿಯು** ಪರಿಶೀಲಿಸಿ, ಅರ್ಹವಾದ ಸಂಸ್ಥೆಗಳನ್ನು ವಿವಿಧ ವರ್ಗಗಳ ಮಾರಾಟಗಾರರ ನಮೂದಿತ ಪಟ್ಟಿ(Empanelled Vendors list)ಗೆ ಸೇರಿಸಲು ಮೇಲೆ ಓದಲಾದ (2)ರ ನಡವಳಿಯ ಮೂಲಕ ಶಿಪಾರಸ್ಸು ಮಾಡಿದೆ.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ 08.07.2019 ರಂದು ನಡೆದ **ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಸಮಿತಿಯು** ಮೇಲೆ (3)ರಲ್ಲಿ ಓದಲಾದ ನಡವಳಿಯಂತೆ, ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಸಮಿತಿಯ ಉಪ ಸಮಿತಿಯ ಶಿಪಾರಸ್ಸನ್ನು ಅನುಮೋದಿಸಿದೆ. ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಸಮಿತಿಯು ಅನುಮೋದಿಸಿದಂತೆ, ಯಾವ ವರ್ಗಗಳಲ್ಲಿ 03 ಮತ್ತು 03 ಗಿಂತ ಹೆಚ್ಚಿನ ಸಂಸ್ಥೆಗಳು ಅರ್ಹವಾಗಿದ್ದಲ್ಲಿ, ಅಂತಹ ವರ್ಗಗಳ ಹೊಸ ಮಾರಾಟಗಾರರ ನಮೂದಿತ ಪಟ್ಟಿಯನ್ನು ಹೊರಡಿಸಲು ಪ್ರಸ್ತಾಪಿಸಲಾಗಿದೆ.
4. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು, 2000 ದ ನಿಯಮ 27 ರನ್ವಯ (ಅದರಲ್ಲಿನ ಪರಂತುವೂ ಒಳಗೊಂಡಂತೆ) ಪೂರ್ವಅರ್ಹತೆ ಹೊಂದಿರುವ ಟೆಂಡರ್‌ದಾರುಗಳ ಪಟ್ಟಿಯನ್ನು(list of pre qualified tenderers duly empanelled) ಉಪಯೋಗಿಸಿಕೊಂಡು E-Procurement (ಇ-ಸಂಗ್ರಹಣೆ) ಮೂಲಕವಾಗಲಿ ಅಥವಾ ಕೆಟಿಪಿಪಿ ನಿಯಮಾನುಸಾರ , ಟೆಂಡರ್‌ಗಳನ್ನು ಕರೆಯಲು ಆಸ್ಪದ ಇರುತ್ತದೆ. ಅದರಂತೆ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 50 ಇಆಇ 2019**
**ಬೆಂಗಳೂರು ದಿನಾಂಕ: 06 ನೇ ಸೆಪ್ಟೆಂಬರ್ 2019.**

5. ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನಲೆಯಲ್ಲಿ, ರಾಜ್ಯದಲ್ಲಿರುವ ವಿವಿಧ ಸರ್ಕಾರಿ ಕಛೇರಿಗಳಲ್ಲಿ ಗಣಕೀಕರಣಕ್ಕಾಗಿ ಅವಶ್ಯವಿರುವ ಗಣಕ ಯಂತ್ರಗಳು, ಪ್ರಿಂಟರಗಳು, ಅವುಗಳ ಪೂರಕ ಸಾಧನಗಳು, ಯು.ಪಿ.ಎಸ್, ತರಬೇತಿ, ಡೇಟಾ ಎಂಟ್ರಿ ಹಾಗೂ ವಾರ್ಷಿಕ ನಿರ್ವಹಣೆ ಮುಂತಾದ

ಉಪಕರಣ/ಸಾಮಗ್ರಿ/ಸೇವೆಗಳನ್ನು ಪೂರೈಸುವುದಕ್ಕಾಗಿ ಅನುಬಂಧ 02 ರಿಂದ 11 ಗಳಲ್ಲಿ ನಮೂದಿಸಿದ ವಿವಿಧ ವರ್ಗಗಳ ಮಾರಾಟಗಾರರ ನಮೂದಿತ ಪಟ್ಟಿಯನ್ನು, ಅನುಬಂಧ-1 ಹಾಗೂ ಇತರ ಅನುಬಂಧಗಳಲ್ಲಿನ ಸೂಚನೆಗಳಿಗೆ ಒಳಪಟ್ಟು, ಈ ಮೂಲಕ ಸರ್ಕಾರದ ಅನುಮೋದನೆಯನ್ನು ನೀಡಿದೆ. ಸದರಿ ಪಟ್ಟಿಗಳ ಸಿಂಧುತ್ವವು ದಿನಾಂಕ: **30.09.2021 ರಂದು** ಕೊನೆಗೊಳ್ಳುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ

ಮತ್ತು ಅವರ ಹೆಸರಿನಲ್ಲಿ,

6-9-19

**(ವೀರಭದ್ರ)**

ಪೀಠಾಧಿಕಾರಿ-1,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ

ಇಲಾಖೆ(ಇ-ಆಡಳಿತ)

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು.
4. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
5. ಎಲ್ಲಾ ಕ್ಷೇತ್ರೀಯ ಇಲಾಖೆಗಳ ಮುಖ್ಯಸ್ಥರಿಗೆ.
6. ಮಹಾಲೇಖಾಪಾಲಕರು, ಲೆಕ್ಕಪತ್ರ 1 ಮತ್ತು 2, ಕರ್ನಾಟಕ, ಬೆಂಗಳೂರು.
7. ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-12), ವಿಧಾನ ಸೌಧ, ಬೆಂಗಳೂರು.
9. ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟನೆಗಾಗಿ.
10. ಸಂಬಂಧಪಟ್ಟ ಸಂಸ್ಥೆಗಳು.
11. ಶಾಖಾ ರಕ್ಷಕ ಕಡತ / ಹೆಚ್ಚುವರಿ ಪ್ರತಿಗಳು.

**Annexe-1**

**File No.DPAR/50/EGM/2019-DS-dparegovsec**

**(Government Order No. DPAR 50 EGM 2019 dated: 06.09.2019.)**

**General instructions**:

**To Vendors:**

1. The empanelment of vendors under various categories does not mean guarantee for Government enquiries/orders.

2. The empanelled vendors can quote and supply approved items only.

3. The empanelled vendors cannot authorise their partners, other than approved partners, to quote on their behalf.

4. The empanelled vendor may authorise only one approved partner to quote on its behalf for a particular enquiry.

5. On receipt of the enquiry, if the empanelled vendor does not respond to the enquiry, such a empanelled vendor will be blacklisted as being non- responsive. If empanelled vendors cannot supply the required items, a regret letter with reason is must.

6. If the empanelled vendor sends more than two such regret letters in a row, it will be blacklisted.

7. After sales service will be the responsibility of the empanelled vendors either directly or through their authorised service centers.

**To User Departments**:

1. Departments should send their enquiries to all the empanelled vendors of the respective category.
2. Obtaining EMD, Bank Guarantee etc, from empanelled vendors shall be as per the provisions of the relevant law.
3. If any empanelled vendor does not respond or sends regret letter to an enquiry of a department, it shall report the same to the Principal Secretary to Government, DPAR(e-Governance) with complete details.

6-9-19
(Veerabhadra)
Desk Officer-1
Department of Personnel and
Administrative Reforms (e-Governance).